16

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER

ದಿನಾಂಕ : DATE : 16/2/2021

# ಸಿಎಂ ವಿರುದ್ಧ ಮುಂದುವರಿದ ಯತ್ನಾಳ ವಾಗ್ದಾಳಿ

ವಿಜಯಪುರ: ಕಾಂಗ್ರೆಸ್, ಲಾಲು ಪ್ರಸಾದ ಯಾದವ, ದೇವೇಗೌಡರ ಕುಟುಂಬಗಳ ಪಕ್ಷಗಳಂತೆ ಬಿಜೆಪಿ ಕುಟುಂಬ ಆಧಾರಿತ ಪಕ್ಷವಲ್ಲ, ಕೋಟ್ಯಂತರ ಕಾರ್ಯಕರ್ತರ ಪರಿಶ್ರಮದಿಂದ ಕಟ್ಟಲ್ಪಟ್ಟಿರುವ ಬಿಜೆಪಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಪುತ್ರ ವಿಜಯೇಂದ್ರನ ಸರ್ವಾಧಿಕಾರಿ ಧೋರಣೆಯಿಂದ ಹಾನಿಯಾಗುತ್ತಿದೆ. ಪಕ್ಷದವರಿಷ್ಠರು ಇದನ್ನು ಗಮನಿಸಬೇಕೆಂದು ಬಿಜೆಪಿ ಬಂಡಾಯ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿ, ಯಡಿಯೂರಪ್ಪ ಪಕ್ಷ ಕಟ್ಟಲು ಪ್ರವಾಸ ಮಾಡಿದಾಗ ಅವರ ವಾಹನಕ್ಕೆ ಇಂಧನ ಹಾಕಿಸಿ, ಪಕ್ಷ ಕಟ್ಟಲು ದುಡಿದವರು ನಾವು. ಪಕ್ಷ ಕಟ್ಟಿದ ಯಡಿಯೂರಪ್ಪ ಮುಖ್ಯಮಂತ್ರಿ ಆಗಲಿ ಎಂದು ಹೋರಾಟ ಮಾಡಿದವು. ಆದರೆ ಯಡಿಯೂರಪ್ಪ ಹಾದಿ ಬಿಟ್ಟಿದ್ದಾರೆ. ಮುಖ್ಯಮಂತ್ರಿಗಳ ಸರ್ಕಾರಿ ಅಧಿಕೃತ ನಿವಾಸ ಕಾವೇರಿಯಲ್ಲಿ ಸರ್ವಾಧಿಕಾರಿ ವಿಜಯೇಂದ್ರ ಆಡಳಿತ ನಡೆಯುತ್ತಿದೆ. ಇಡೀ ಕುಟುಂಬದಲ್ಲಿ ಹಾವು-ಚೇಳು ಸೇರಿಕೊಂಡು ಮುಕ್ತವಾಗಿ ಕೆಲಸ ಮಾಡಲು ಬಿಡದಂತೆ ಲೂಟಿ ನಡೆಸುತ್ತಿವೆ. ವಿಜಯೇಂದ್ರ ವರ್ಗಾವಣೆ ದಂಧೆಯಲ್ಲಿ ತೊಡಗಿದ್ದಾರೆ ಎಂದರು.

## ಪೊಲೀಸ್ ಭದ್ರತೆ ಮುಂದುವರಿಕೆ

ವಿಜಯಪುರ: ಸಿಎಂ ಯಡಿಯೂರಪ್ಪ ಅವರನ್ನು ಟೀಕಿಸಿದ್ದಕ್ಕೆ ತಮಗೆ ನೀಡಿದ್ದ ಪೊಲೀಸ್ ಭದ್ರತೆಯನ್ನು ಹಿಂಪಡೆಯಲಾಗಿತ್ತು. ಇದೀಗ ಪೊಲೀಸ್ ಇಲಾಖೆ ಮರಳಿ ಭದ್ರತೆ ಮುಂದುವರಿಸಿದೆ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿ, ನನಗೆ ನೀಡಿದ್ದ ಪೊಲೀಸ್ ಭದ್ರತೆಯನ್ನು ಹಿಂಪಡೆಯಲಾಗಿತ್ತು. ಕಳೆದ ಎರಡು ದಿನಗಳ ಹಿಂದೆ ಪೊಲೀಸ್ ಭದ್ರತೆಯನ್ನು ಮತ್ತೆ ಮುಂದುವರಿಸಿದೆ. ಸಿಎಂ ಪುತ್ರ ಹೇಳಿದ್ದಾನೆಂದು ಯಾರದೋ ಜೀವ ಬಲಿ ಕೊಡಲು ಒಪ್ಪದ ಪೊಲೀಸ್ ಇಲಾಖೆ ನನಗೆ ನೀಡಿದ್ದ ಭದ್ರತೆಯನ್ನು ಪುನಾರಂಭಿಸಿದೆ ಎಂದರು.